ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಜಮೀನು ಗೋಮಾಳವೋ ಅಥವಾ ಆಕಾರ ಬಂಜರೋ ಎಂದು ತಿಳಿಸುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅದು ಗೋಮಾಳವಲ್ಲ. ಆದರೆ ಅಲ್ಲಿ ನೀರಿನ ಕಾಲುವೆಗಳು ಹೋಗುತ್ತವೆ ಯಾದುದರಿಂದ ಆ ಭೂಮಿಯನ್ನು ಕೊಡಬಾರದೆಂದು ಖಾತೆಯ ಪುಸ್ತಕದಲ್ಲಿ ಷರಾ ಇದೆ. ಆದುದರಿಂದ ಈ ಭೂಮಿಯನ್ನು ಯಾರಿಗೂ ಕೊಟ್ಟಿಲ್ಲ.

ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಜಮೀನಿನ ಆಕಾರ ಮತ್ತು ವಿಸ್ತೀರ್ಣವೆಷ್ಟು ಎಂಬುದನ್ನು ಹೇಳುತ್ತೀರಾ ?

Sri M. P. PATIL.—I am sorry that is not with me.

ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಸರ್ವೆನಂಬರ್ ಎಂಟರಲ್ಲಿ ಈವಾಗ ಕುಂಚೆ ದ್ಯಾಮಪ್ಪ ಎನ್ನುವವರು ಜಮೀನನ್ನು ಉತ್ತು ತಮ್ಮ ಸ್ವಾಧೀನದಲ್ಲಿ ಇಟ್ಟು ಕೊಂಡಿದ್ದಾರಲ್ಲವೆ ?

ಶ್ರೀ ಎಂ. ಪಿ. ಪಾಟೀಲ್.—ಅದು ನನಗೆ ಗೊತ್ತಿಲ್ಲ.

ಶ್ರೀ ಟಿ. ಹನುಮಯ್ಯ.—ಎಷ್ಟು ಜಮೀನು ಸರ್ವೆ ನಂಬರು ಎಂಟರಲ್ಲಿದೆ ?

ಅಧ್ಯಕ್ಷರು.—ಆ ಮಾಹಿತಿ ಇಲ್ಲ

ಶ್ರೀ ಟಿ. ಹನುಮಯ್ಯ.—ಸಾಗುವಳಿ ಚೀಟಿ ಕೊಟ್ಟಿಲ್ಲವೇ ?

ಅಧ್ಯಕ್ಷರು.—ಸಾಗುವಳಿ ಮಾಡಿಲ್ಲ.

Repairs to the sluice of Ganjikere tank in Hosadurga Taluk.

Q.—1260. Sri B. S. SHANKARAPPA (Hosadurga).—

Will the Government be pleased to state :—

(*a*) whether they are aware of the fact that water is being wasted for want of necessary repairs to the sluice of the Ganjikere tank in Mattodu hobli, Hosadurga taluk ;

(*b*) whether they are also aware that as result thereof the crops are drying up ;

(*c*) if so, the action taken in this regard ?

A.—Sri H. K. VEERANNA GOWDH (Minister for Public Works).—

(*a*) No.

(*b*) and (*c*) Do not a rise in view of reply to clause (*a*).

ಶ್ರೀ ಬಿ. ಎಸ್. ಶಂಕರಪ್ಪ.—(*a*)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಕೆರೆ ತೂಬಿನಲ್ಲಿ ನೀರು ಹೋಗುವುದಿಲ್ಲ ಎನ್ನುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಕಥೆಯನ್ನೆಲ್ಲಾ ಒಟ್ಟಿಗೆ ಹೇಳಿಬಿಡುತ್ತೇನೆ. ಈ ಕೆರೆಗೆ ಎರಡು ತೂಬುಗಳಿವೆ, 7 ಮತ್ತು 20ನೆಯ ಗ್ರೇಡಿನಲ್ಲಿ. ಇದರ ಕೆಪ್ಯಾಸಿಟಿ, 417 ಯೂನಿಟ್. ಬರತಕ್ಕಂಥ ನೀರು 500 ಯೂನಿಟ್. ಕೆರೆ ಕೆಳಗೆ ಇರತಕ್ಕಂಥ ಜಮೀನು 381 ಎಕರೆ. ಇದರಲ್ಲಿ 351 ಎಕರೆ 1950ನೆಯ ಇಸವಿಯಿಂದ ಸಾಗುವಳಿಯಾಗುತ್ತಿದೆ. ಕೆರೆಯ ಎರಡು ತೂಬುಗಳೂ ಚೆನ್ನಾಗಿವೆ. ಇದರ ಹಿಂದಿನ ಕಟ್ಟಡವೂ ಚೆನ್ನಾಗಿದೆ. ಲೀಕೇಜ್ ಆಗುತ್ತಾ ಇಲ್ಲ. 1950ನೆಯ ಇಸವಿಯಲ್ಲಿ ಕೆರೆ ಉಡಾವಣೆ ಮಾಡಬೇಕೆಂದು ಅರ್ಜಿ ಬಂದಿತ್ತು. ಕೆರೆಗೆ ಬರತಕ್ಕಂಥ ನೀರು ಸಾಕಾಗುತ್ತದೆ. 1954ನೆಯ ಇಸವಿಯಲ್ಲಿ ಏಳನೆಯ ಗ್ರೇಡಿನಲ್ಲಿ ತೂಬು ಸ್ವಲ್ಪ ಸರಿದಿತ್ತು. ರಿಪೇರಿಯಾಗಿದೆ. ಈ ಕೆರೆಗೆ ರಿಪೇರಿಯಾಗಿದೆ. ಜಮೀನಿನ ಪೈರು ಒಣಗಿ ಹೋಗಿಲ್ಲ. ರೆವಿಷ್ಟ್ ಯಾವಾಗಲೂ ಕೊಟ್ಟಿಲ್ಲ. ಆದ್ದರಿಂದ ಶ್ರೀ ಶಂಕರಪ್ಪನವರು ಕೇಳತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—1954ನೆಯ ಇಸವಿಯಲ್ಲಿ ಸ್ವಾರ್ ಇನ್ಸ್‌ಪೆಕ್ಷನ್‌ಆಗಿ ತೂಬಿನಲ್ಲಿ ಲೀಕೇಜ್ ಇದೆ ಎಂಬ ವರದಿ ಇದೆಯಲ್ಲವೆ ?

Sri H. K. VEERANNA GOWDH.—It is not seeking information, but it is giving information challenging the answer.

ಶ್ರೀ ಬಿ. ಎಸ್. ಶಂಕರಪ್ಪ.—ಈಗ ನೀರು ಲೀಕ್ ಆಗುತ್ತಾ ಇಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ನಿಜವಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಮಗೆ ಯಾವ ಡಿಪಾರ್ಟ್‌ಮೆಂಟಿನಿಂದ ಉತ್ತರ ಬಂದಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನಿಂದ ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಬ್ಬ ಸದಸ್ಯರು ಹೇಳಿದಾಗ, ಪರಿಶೀಲನೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—Information ಕೇಳಿದ್ದಕ್ಕೆ, ಉತ್ತರ ಇಲ್ಲ ಎಂದು ಹೇಳಿದೆ. ನೀವು ಕಾಗದ ಬರೆಯಿರಿ, ತನಿಖೆ ಮಾಡುತ್ತೇನೆ. ಇನ್ಸ್‌ಪೆಕ್ಷನ್ ಮಾಡುತ್ತೇನೆ.

ಅಧ್ಯಕ್ಷರು.—ಇನ್‌ಫರ್‌ಮೇಷನ್ ದೊರಕಿಸಿಕೊಳ್ಳುವುದಕ್ಕೆ ಮಾತ್ರ ಈ ವೇಳೆ ಇದೆ; ವಿವಾದಗಳನ್ನು ಪರಿಹರಿಸುವುದಕ್ಕಲ್ಲ.

Encroachment on Government Road

Q.—1341. Sri G. N. PUTTANNA (Tumkur).—

Will the Government be pleased to state :—

(*a*) whether it is not a fact that the District Board, Tumkur district, sanctioned a road from Adi Hanumantharaya's Temple originating from Harenahalli-Kallur Road to Goppenhalli and on to Hullekere-Turuvekere Road about five years ago ;

(*b*) whether they are aware that a number of persons have encroached

upon the Government road at Kanderi through which the road passes;

(*c*) whether they are aware that the said road is being cultivated by some people;

(*d*) whether they would order for the immediate formation of the road by taking action against the offenders?

A.—Sri R. CHENNIGARAMAIAH (Minister for Local Self-Government).—

(*a*) Yes.

(*b*) Kanderi is a Government voni and some encroachment has been noticed.

(*c*) Nobody has cultivated.

(*d*) The finances of the District Board, Tumkur, do not permit to undertake the work. Action is being taken against the offenders on Takarar Takta.

ಶ್ರೀ ಜಿ. ಎಚ್. ಪುಟ್ಟಣ್ಣ.—(*b*) ಗೆ ಉತ್ತರದಲ್ಲಿ "some encroachment has been noticed" ಎಂದು ಹೇಳಿದ್ದೀರಿ. ಎಷ್ಟು ವರ್ಷದಿಂದ encroach ಆಗಿದೆ ಎನ್ನುವುದನ್ನು ಹೇಳುತ್ತೀರ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇನ್‌ಫರ್‌ಮೇಷ್ ಇಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—'Nobody has cultivated' ಎಂದು ಉತ್ತರ ಕೊಟ್ಟಿದ್ದೀರಿ. 20 ವರ್ಷ ಗಳ ಲಾಗಾಯಿತು ಅಲ್ಲಿ ಅಡಿಕೆ ತೋಟ ಮಾಡಿಕೊಂ ಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ. ಸರ್ಕಾರಿ ಓಣಿಯಲ್ಲಿ ವೆಂಕಟಪ್ಪ ಎಂಬವರು ಚ್ರೆಂಚ್ ಹೊಡೆ ದಿದ್ದಾರೆ. Encroach ಮಾಡಿ ವ್ಯವಸಾಯ ಮಾಡಿ ದ್ದಾರೆಂಬ information ಇಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ರಸ್ತೆ ಕೆಲಸ ಪ್ರಾರಂಭ ವಾಗಿದೆಯೋ ಇಲ್ಲವೋ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—Intimation ಬಂದಿ ದೆಯೇ?

Sri R. CHENNIGARAMAIAH.—Due to paucity of funds in the District Board, they have not been able to take up the work.

ಶ್ರೀ ಜಿ. ಎಚ್. ಪುಟ್ಟಣ್ಣ.—ತಮಗೆ ಬಂದಿರುವ information ಎಲ್ಲಾ ಶುದ್ಧ ತಪ್ಪು. Work complete ಆಗಿದೆ, ಅಥವಾ one-eighth portion of the work, complete ಆಗಿಲ್ಲ ಎಂದು ಹೇಳು ತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ವಿಚಾರ ಮಾಡು ತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—Encroachment ಆಗಿಲ್ಲವೆಂದು ಹೇಳಿದಿರಿ. Encroach ಆಗಿರುವ ಜಾಗ ದಲ್ಲಿ ಎಕರೆಗೆ ಆರು ಸಾವಿರ ರೂಪಾಯಿ ಎನ್ನುವುದು ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—Encroachment ಆಗಿದೆಯೆಂದು ಒಪ್ಪಿಕೊಂಡಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—'Action is being taken against the offenders on Takrar Takta' ಎಂದು ಹೇಳಿದ್ದೀರಿ. ಕ್ರಮ ಕೈಕೊಂಡು ಎಷ್ಟು ದಿವಸವಾಯಿತು?

ಶ್ರೀ ಆರ್. ಚೆನ್ನಿಗರಾಮಯ್ಯ.—ತಾರೀಖು ಗೊತ್ತಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಡಿಸ್ಟ್ರಿಕ್ಟ್ ಬೋರ್ಡ್ ರಿಸೋರ್ಸಸ್ ಎಂದರೆ ಯಾವುವು?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗ ಎಷ್ಟು ಜನರು ತಕರಾರು ತಃಖ್ತೆ ಹಾಕಿದ್ದಾರೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ವೆಂಕಟಪ್ಪ ಎಂಬ ವರು ಒಬ್ಬರು ಮಾತ್ರ ಸರ್ಕಾರಿ ಓಣಿಯಲ್ಲಿ ಚ್ರೆಂಚ್ ಹೊಡೆದಿದ್ದಾರೆ. ಅವರ ಮೇಲೆ ತಕರಾರು ತಃಖ್ತೆ ಬಂದಿದೆ. ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಐದಾರು ಸಾವಿರ ರೂಪಾಯಿನ ಸ್ಪತ್ತನ್ನು encroach ಮಾಡಿ ರೋಡ್ obstruct ಮಾಡಿದ್ದಾರೆ ಅಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—Encroachment question ಒಪ್ಪಿಕೊಂಡೇ ಇಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ತಕರಾರು ತಃಖ್ತೆ ಏತಕ್ಕೆ ಹಾಕಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೌರ್ನಮೆಂಟ್ ಪರ್ಮಿಷನ್ ಇಲ್ಲದೆ ಟ್ರಾಫಿಕ್ ಅಬ್‌ಸ್ಟ್ರಕ್ಟ್ ಮಾಡಿದ್ದಾ ರೆಂದು ತಕರಾರು ತಃಖ್ತೆ ಹಾಕಿದ್ದಾರೆ. ಅದಕ್ಕೆ ಆಕ್ಷೇ ತೆಗೆದುಕೊಂಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(*b*)ನಲ್ಲಿ "some encroachment has been noticed" ಎಂದು accept ಮಾಡಿಕೊಂಡಿಲ್ಲವೇ? ಇದರ ಅರ್ಥವೇನು?

ಶ್ರೀ ಆರ್. ಚೆನ್ನಿಗರಾಮಯ್ಯ.—ಚ್ರೆಂಚ್ ಹೊಡೆ ದಿದೆ. ವ್ಯವಸಾಯ ಮಾಡಿಲ್ಲ.

Sri C. J. MUCKANNAPPA.—Answer (*b*): "……some encroachment has been noticed." I want to know what you mean by 'encroachment has been noticed'.

Sri R. CHENNIGARAMAIAH.—Some private person has dug a trench in the Government voni. That is construed as encroachment.

Sri C. J. MUCKANNAPPA.—I want to know what is the extent of the road that is encroached upon.

Sri R. CHENNIGARAMAIAH.—The dimension of the trench is not available. I am prepared to get it.

Working Capital Loans for Handloom Industry.

Q.—1371. Sri E. PUNDLIKAPPA (Kushtagi).—

Will the Government be pleased to state:—

(*a*) whether there is a scheme under their contemplation for issuing loans